ಪುರಸಭಾ ಕಾರ್ಯಾಲಯ, ಉಳ್ಳಾಲ
ದಕ್ಷಿಣ ಕನ್ನಡ ಜಿಲ್ಲೆ, ಅಂಚೆ : ಉಳ್ಳಾಲ - 575 020
Website : www.ullaltown.gov.in Email : co.ullal@gmail.com
ದೂರವಾಣಿ
ಕಛೇರಿ : 2466226
ಫ್ಯಾಕ್ಸ್ : 2468226
ಸಹಾಯವಾಣಿ : 2462126

ದಿನಾಂಕ 18-08-2009ನೇ ಮಂಗಳವಾರ ಅಪರಾಹ್ನ 3-00 ಗಂಟೆಗೆ ಸರಿಯಾಗಿ ಉಳ್ಳಾಲ ಪುರಸಭೆಯ ಕಚೇರಿಯ ಸಭಾಂಗಣದಲ್ಲಿ ಪುರಸಭಾ ಅಧ್ಯಕ್ಷರಾದ ಶ್ರೀ ಯು.ಎ ಇಸ್ಮಾಯಿಲ್ ಇವರ ಅಧ್ಯಕ್ಷತೆಯಲ್ಲಿ ಜರಗಿದ ಸಾಮಾನ್ಯ ಸಭೆಯ ನಡವಳಿಗಳು

ಹಾಜರಿ: ಅಧ್ಯಕ್ಷರು ಮತ್ತು ಸದಸ್ಯರು
------

ವಿಷಯ: 99: ಹಿಂದಿನ ಸಾಮಾನ್ಯ ಸಭೆಯ ನಡವಳಿ (28-07-2009)ಯನ್ನು ಪರಿಶೀಲಿಸಿ ಮಂಜೂರು ಮಾಡುವ ಕುರಿತು.
ನಿರ್ಣಯ: ವಿಷಯ ಸಂಖ್ಯೆ: 87 ಮತ್ತು 88ನ್ನು ಮುಂದಿನ ಸಭೆಗೆ ಮಂಡಿಸುವುದಾಗಿ ನಿರ್ಣಯಿಸಲಾಯಿತು. ವಿಷಯ ನಂಬ್ರ: 89ನ್ನು ಪುನ: ಚರ್ಚಿಸಲಾಗಿ ಈ ಹಿಂದಿನ ಸಭೆಯಲ್ಲಿ ಮುಖ್ಯಾಧಿಕಾರಿಯವರು ಕಡತದಲ್ಲಿರುವ ಸರ್ಕಾರದ ಆದೇಶವನ್ನು ಓದಿ ತಿಳಿಸಿರುತ್ತಾರೆ. ಸದ್ರಿ ಆದೇಶವನ್ನು ಉಲ್ಲಂಘನೆಯಾಗದಂತೆ ಮುಂದಿನ ಕ್ರಮ ಕೈಗೊಳ್ಳುವುದಾಗಿ ನಿರ್ಣಯಿಸಲಾಯಿತು.

ವಿಷಯ: 100: ಜುಲೈ 2009 ತಿಂಗಳ ಜಮಾಖರ್ಚು ಪರಿಶೀಲಿಸಿ ಮಂಜೂರು ಮಾಡುವ ಬಗ್ಗೆ.
ನಿರ್ಣಯ ಈ ಬಗ್ಗೆ ಚರ್ಚಿಸಲಾಗಿ ಪರಿಶೀಲಿಸಿ ಮಂಜೂರು ಮಾಡಲಾಯಿತು.
ವಿಷಯ: 101: ಹೊಸದಾಗಿ ಗೃಹಬಳಕೆ, ವಾಣಿಜ್ಯ, ಮನೆ ನಿರ್ಮಾಣಗಳಿಗೆ ನೀರಿನ ಸಂಪರ್ಕಕ್ಕೆ ಠೇವಣಿ ಮತ್ತು ಮಾಸಿಕ ಫೀಸು ನಿಗದಿಪಡಿಸುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಈ ಕೆಳಗಿನಂತೆ ಠೇವಣಿ ಮತ್ತು ಫೀಸು ನಿಗದಿಪಡಿಸಲಾಯಿತು.

**ಗೃಹಬಳಕೆ** : ಠೇವಣಿ ರೂ. 2500/-
ಮಾಸಿಕ ದರ ರೂ. 60/-
15000 ಲೀಟರ್‌ಗೆ ಮೇಲ್ಪಟ್ಟು ಪ್ರತಿ ಒಂದುಸಾವಿರ ಲೀಟರ್‌ಗೆ ರೂ 6-00

**ವಾಣಿಜ್ಯ ಬಳಕೆ**: ದೊಡ್ಡ ಉದ್ಯಮ ಠೇವಣಿ -ರೂ. 8000-00 ಮಾಸಿಕ ಫೀಸು ರೂ 250/-
ಮದ್ಯಮ ಉದ್ಯಮ ಠೇವಣಿ _ ರೂ. 6000-00 ಮಾಸಿಕ ಫೀಸು ರೂ. 180/-
ಸಣ್ಣ ಉದ್ಯಮ ಠೇವಣಿ – ರೂ. 4000-00 ಮಾಸಿಕ ಫೀಸು ರೂ 160/-
15000 ಲೀಟರಿಗೆ ಮೇಲ್ಪಟ್ಟು ಪ್ರತಿ ಒಂದು ಸಾವಿರ ಲೀಟರ್‌ಗೆ ರೂ 10-00

ತಾತ್ಕಾಲಿಕ : ಠೇವಣಿ – ರೂ. 6000/-
ಮಾಸಿಕ ದರ ರೂ. 250/-

ವಿಷಯ: 102: ದಿನಾಂಕ 6-8-2009ರಂದು ವಿವಿಧ ಕಾಮಗಾರಿಗಳ ಬಂದ ಟೆಂಡರುಗಳನ್ನು ಪರಿಶೀಲಿಸಿ ಮಂಜೂರು ಮಾಡುವ ಬಗ್ಗೆ.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕೆಳಗಿನಂತೆ ಪರಿಶೀಲಿಸಿ ಮಂಜೂರು ಮಾಡಲಾಯಿತು.

1) ಉಳ್ಳಾಲ ಪುರಸಭಾ ವ್ಯಾಪ್ತಿಯ 5ನೇ ವಾರ್ಡು ಕೋಡಿ ಕೆಳಗಿನಬೀದಿ ಚರಂಡಿಗೆ ಆರ್.ಸಿ.ಸಿ. ಸ್ಲ್ಯಾಬ್ ನಿರ್ಮಿಸಿ ಮುಚ್ಚುವುದು.

ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳಲ್ಲಿ ಅತೀ ಕಡಿಮೆ ದರ ಶೇ7 ಕಡಿಮೆ ದರ ಸೂಚಿಸಿದ ಶ್ರೀ ಆಸ್ಟಿನ್ ವಿಜಯ ಡಿಸೋಜ ಇವರ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

2) ಉಳ್ಳಾಲ ಪುರಸಭಾ ವ್ಯಾಪ್ತಿಯ 4ನೇ ವಾರ್ಡು ಬಂಡಿಕೊಟ್ಯ ಮಲರಾಯ ದೇವಸ್ಥಾನದ ಆವರಣಕ್ಕೆ ಚಪ್ಪಡಿಕಲ್ಲು ಅಳವಡಿಸುವುದು
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಸದ್ರಿ ಕಾಮಗಾರಿಗೆ ಒಬ್ಬರೇ ಟೆಂಡರು ಹಾಕಿರುವುದರಿಂದ ಮರುಟೆಂಡರು ಕರೆಯುವುದಾಗಿ ನಿರ್ಣಯಿಸಲಾಯಿತು.

3) ಉಳ್ಳಾಲ ಪುರಸಭಾ ವ್ಯಾಪ್ತಿಯ 6ನೇ ವಾರ್ಡು ಉಳ್ಳಾಲ ಹೊಯಿಗೆ ಡೈಮಂಡ್ ರಸ್ತೆಯಿಂದ ಎವರೆಸ್ಟ್ ಡಿಸೋಜರವರ ಮನೆಯವರೆಗೆ ಮಣ್ಣಿನ ರಸ್ತೆ ನಿರ್ಮಾಣ
ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳಲ್ಲಿ ಅತೀ ಕಡಿಮೆ ದರ 6.6% ಕಡಿಮೆ ದರ ಸೂಚಿಸಿದ ಶ್ರೀ ಏಲಕ್ಕಿ ಗೌಡ ಇವರ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

4) ಉಳ್ಳಾಲ ಪುರಸಭಾ ವ್ಯಾಪ್ತಿಯ 7ನೇ ವಾರ್ಡುನ ಮಿಲ್ಲತ್‌ನಗರ ರಸ್ತೆ ಮತ್ತು ಚರಂಡಿ ಕಾಂಕ್ರೀಟಿಕರಣ
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಬಂದ ಟೆಂಡರುಗಳಲ್ಲಿ ಶ್ರೀ ಮೊಹಮ್ಮದ್ ಆಶ್ರಫ್, ಭಟ್ಕಳ ಇವರ ದರ 3.99% ಕಡಿಮೆ ಕನಿಷ್ಟ ದರವಾಗಿದ್ದು ಅದೇ ದರದಲ್ಲಿ ಶ್ರೀ ಯು.ಎಚ್. ಅಬ್ದುಲ್ ರಹಿಮಾನ್ ಕಾಟಿಪಳ್ಳ ಇವರು ನಿರ್ವಹಿಸುವುದಾಗಿ ಒಪ್ಪಿರುವುದರಿಂದ ಅಂದಾಜುಪಟ್ಟಿ ದರದ 3.99% ಕಡಿಮೆ ದರದಲ್ಲಿ ಕಾಮಗಾರಿಯನ್ನು ವಹಿಸಿಕೊಡಲು ನಿರ್ಣಯಿಸಲಾಯಿತು.

5) ಉಳ್ಳಾಲ ಪುರಸಭಾ ವ್ಯಾಪ್ತಿಯ 8ನೇ ವಾರ್ಡಿನ ಅಜ್ಜಿಹಿತ್ಲು ಬಳಿ ತೋಡಿಗೆ ಚರಂಡಿ ಕಾಂಕ್ರೀಟಿಕರಣ
ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳಲ್ಲಿ ಅತೀ ಕಡಿಮೆ ದರ ಶೇ 7.99 ಅಧಿಕ ದರ ಸೂಚಿಸಿದ ಶ್ರೀ ಕುಂಞಕೋಯ ತಂಗಳ್, ಕಾಸರಗೋಡು ಇವರ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

6) ಉಳ್ಳಾಲ ಪುರಸಭಾ ವ್ಯಾಪ್ತಿಯ 9ನೇ ವಾರ್ಡಿನ ಅಜ್ಜಿಹಿತ್ಲುವಿನಿಂದ ವೆರೋನಿಕಾ ಮನೆ ಬಳಿಯವರೆಗೆ ರಸ್ತೆ ಕಾಂಕ್ರೀಟಿಕರಣ
ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳಲ್ಲಿ ಅತೀ ಕಡಿಮೆ ದರ ಶೇ 7.99 ಅಧಿಕ ದರ ಸೂಚಿಸಿದ ಶ್ರೀ ಕುಂಞಕೋಯ ತಂಗಳ್, ಕಾಸರಗೋಡು ಇವರ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

7) ಉಳ್ಳಾಲ ಪುರಸಭಾ ವ್ಯಾಪ್ತಿಯ 8ನೇ ವಾರ್ಡಿನ ಅಲೇಕಲ ಶೇಕಬ್ಬನ ಅಂಗಡಿಯಿಂದ ಹಂಝರವರ ಮನೆಯವರೆಗೆ ಚರಂಡಿ ಕಾಂಕ್ರೀಟಿಕರಣ
ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳಲ್ಲಿ ಅತೀ ಕಡಿಮೆದರ 7.99 ಆಧಿಕ ದರ ಸೂಚಿಸಿದ ಶ್ರೀ ಕುಂಞಕೋಯ ತಂಗಲ್ ಕಾಸರಗೋಡು ಇವರ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

8) ಉಳ್ಳಾಲ ಪುರಸಭಾ ವ್ಯಾಪ್ತಿಯ 9ನೇ ವಾರ್ಡಿನ ಅಲೇಕಲ ಮುಖ್ಯ ಚರಂಡಿಗೆ ಆರ್.ಸಿ.ಸಿ. ಸ್ಲ್ಯಾಬ್ ಮುಚ್ಚುವುದು
ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳನ್ನು ಅತೀ ಕಡಿಮೆ ದರ ಶೇ 7.9 ಅಧಿಕ ದರ ಸೂಚಿಸಿದ ಶ್ರೀ ಬಿ.ಎಸ್. ಶರೀಫ್ ಜೋಕಟ್ಟೆ ಇವರ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

9) ಉಳ್ಳಾಲ ಪುರಸಭಾ ವ್ಯಾಪ್ತಿಯ 10ನೇ ವಾರ್ಡಿನ ಪಟೇಲ್ ಕಂಪೌಂಡು ಅಡ್ಡರಸ್ತೆ ಮಣ್ಣು ಹಾಕಿ ಎತ್ತರಿಸಿ ಅಭಿವೃದ್ದಿಪಡಿಸುವುದು
ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳಲ್ಲಿ ಅತಿ ಕಡಿಮೆ ದರ ಸೇ 8.2 ಕಡಿಮೆ ಸೂಚಿಸಿದ ಶ್ರೀ ರವಿನಾಯಕ್, ಸುರತ್ಕಲ್ ಇವರ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

10) ಉಳ್ಳಾಲ ಪುರಸಭಾ ವ್ಯಾಪ್ತಿಯ 12ನೇ ವಾರ್ಡಿನ ಹೈದಾರಾಲಿ ನಗರ ಚರಂಡಿ ಕಾಂಕ್ರೀಟಿಕರಣ
ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳಲ್ಲಿ ಅತೀ ಕಡಿಮೆ ದರ ಶೇ 8 ಅಧಿಕ ದರ ಸೂಚಿಸಿದ ಶ್ರೀ ಶಂಶುದ್ದೀನ್ ಹರೇಕಳ ಇವರ ದರವನ್ನು ಒಪ್ಪದೆ ಮಾತುಕತೆಗೆ ಕರೆದು ನೆಗೋಶಿಯೇಶನ್ ಪ್ರಕಾರ 7.9% ಅಧಿಕ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

11) ಉಳ್ಳಾಲ ಪುರಸಭಾ ವ್ಯಾಪ್ತಿಯ 16ನೇ ವಾರ್ಡಿನ ಫಿರ್ದೋಸ್‌ನಿಂದ ದರ್ಗಾ ಮುಖ್ಯರಸ್ತೆಯವರೆಗೆ ಚರಂಡಿ ಕಾಂಕ್ರೀಟಿಕರಣ(ಎಸ್.ಎಫ್.ಸಿ ನಿಧಿ ರೂ 3-00ಲಕ್ಷ ಮತ್ತು ಪುರಸಭೆ ನಿಧಿ ರೂ. 1.30ಲಕ್ಷ
ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳಲ್ಲಿ ಅತೀ ಕಡಿಮೆ ದರ 7.9% ಅಧಿಕ ದರ ಸೂಚಿಸಿದ ಶ್ರೀ ಬಿ.ಎಂ ಆಸೀಫ್ ಮುಲ್ಕಿ ಇವರ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

12) ಉಳ್ಳಾಲ ಪುರಸಭಾ ವ್ಯಾಪ್ತಿಯ 17ನೇ ವಾರ್ಡು ಕಡೆಹಿತ್ಲು ರಸ್ತೆ ಮತ್ತು ನಾಗಕನ್ನಿಕಾ ಎದುರಿನ ರಸ್ತೆ ಕಾಂಕ್ರೀಟಿಕರಣ (ಅಂದಾಜುಮೊತ್ತ ರೂ 2-00ಲಕ್ಷ)
ನಿರ್ಣಯಳ ಈ ಬಗ್ಗೆ ಬಂದ ಟೆಂಡರುಗಳಲ್ಲಿ ಅತೀ ಕಡಿಮೆ ದರ 5.5% ಕಡಿಮೆ ಸೂಚಿಸಿದ ಶ್ರೀ ಆಸ್ಟಿನ್ ವಿಜಯ ಡಿಸೋಜ, ಮರೋಳಿ ಇವರ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

13) ಉಳ್ಳಾಲ ಪುರಸಭಾ ವ್ಯಾಪ್ತಿಯ 19ನೇ ವಾರ್ಡಿನ ಉಳ್ಳಾಲಬೈಲು ಕಲ್ಲುರ್ಟಿ ದೇವಸ್ಥಾನದ ಹಿಂಬದಿಯ ಚರಂಡಿ ಕಾಂಕ್ರೀಟಿಕರಣ ವಿಸ್ತರಿಸುವುದು ಡ್ರೈನೇಜ್ 40ರಿಂದ 70ವರೆಗೆ
ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳಲ್ಲಿ ಅತೀ ಕಡಿಮೆ ದರ 5% ಕಡಿಮೆ ದರ ಸೂಚಿಸಿದ ಶ್ರೀ ಹೇಮಂತ ಶೆಟ್ಟಿ ಇವರ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

14) ಉಳ್ಳಾಲ ಪುರಸಬಾ ವ್ಯಾಪ್ತಿಯ 20ನೇ ವಾರ್ಡು ಕಾಪಿಕಾಡು ಈಶ್ವರಾನಂದ ಭಜನಾಮಂದಿರ ಅಡ್ಡರಸ್ತೆ ಕಾಂಕ್ರೀಟಿಕರಣ
ಈ ಬಗ್ಗೆ ಬಂದ ಟೆಂಡರುಗಳಲ್ಲಿ ಅತೀ ಕಡಿಮೆ ದರ 6.6 ಕಡಿಮೆ ದರ ಸೂಚಿಸಿದ ಶ್ರೀ ಶಿವಪ್ರಸಾದ್ ಆಳ್ವ ಕೋಟೆಕಾರ್ ಇವರ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು

15) ಉಳ್ಳಾಲ ಪುರಸಭಾ ವ್ಯಾಪ್ತಿಯ 21ನೇ ವಾರ್ಡಿನ ಮಂಚಿಲ ಮಸೀದಿಯ ರಸ್ತೆ ಕಾಂಕ್ರೀಟಿಕರಣ
ಈ ಬಗ್ಗೆ ಬಂದ ಟೆಂಡರುಗಳಲ್ಲಿ ಅತೀ ಕಡಿಮೆ ದರ 5% ಕಡಿಮೆ ದರ ಸೂಚಿಸಿದ ಶ್ರೀ ಶಿವಪ್ರಸಾದ್ ರಾವ್ ಕೊಲ್ಯ ಇವರ ದರವನ್ನ ಒಪ್ಪಿ ಮಂಜೂರು ಮಾಡಲಾಯಿತು.

16) ಉಳ್ಳಾಲ ಪುರಸಭಾ ವ್ಯಾಪ್ತಿಯ 22ನೇ ವಾರ್ಡಿನ ಮದರ್ ತೆರೆಸಾ ರಸ್ತೆ ವಿಸ್ತರಿಸಿ ಅಭಿವೃದ್ದಿ ಪಡಿಸುವುದು
ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳಲ್ಲಿ ಅತೀ ಕಡಿಮೆ ದರ 5.01 ಕಡಿಮೆ ದರ ಸೂಚಿಸಿದ ಶ್ರೀ ಅಬ್ದುಲ್ ರೆಹಮಾನ್ ಕಾಟಿಪಳ್ಳ ಇವರ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

17) ಉಳ್ಳಾಲ ಪುರಸಭಾ ವ್ಯಾಪ್ತಿಯ 23ನೇ ವಾರ್ಡು ಕೆರೆಬೈಲು ಅಂಗನವಾಡಿ ರಸ್ತೆಗೆ ಮೆಟಲಿಂಗ್ ಮಾಡುವುದು

ನಿರ್ಣಯ:ಈ ಬಗ್ಗೆ ಬಂದ ಟೆಂಡರುಗಳಲ್ಲಿ ಅತೀ ಕಡಿಮೆ ದರ 5.03 ಕಡಿಮೆ ದರ ಸೂಚಿಸಿದ್ದು ಶ್ರೀ ಎಚ್.ಅಬ್ದುಲ್ ರೆಹಮಾನ್ ಕಾಟಿಪಳ್ಳ ಇವರ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

18) ಉಳ್ಳಾಲ ಪುರಸಭಾ ವ್ಯಾಪ್ತಿಯ 226ನೇ ವಾರ್ಡಿನ ಬಬ್ಬುಕಟ್ಟೆ ಶಾಲೆಯ ಹಿಂಬಂದಿಯ ರಸ್ತೆಯ ಚರಂಡಿ ಕಾಂಕ್ರೀಟಿಕರಣ
ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳಲ್ಲಿ ಅತೀ ಕಡಿಮೆ ದರ 6.02 ಕಡಿಮೆ ದರ ಸೂಚಿಸಿದ ಶ್ರೀ ಅಬ್ದುಲ್ ರೆಹಮಾನ್ ಕಾಟಿಪಳ್ಳ ಇವರ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

19) ಉಳ್ಳಾಲ ಪುರಸಭಾ ವ್ಯಾಪ್ತಿಯಲ್ಲಿ ಕೋಟೆಪುರ ಜುಮ್ಮಾ ಮಸೀದಿ ವಠಾರಕ್ಕೆ ಸೆಮಿ ಹೈಮಾಸ್ಟ್ ಕಂಬ ಹಾಕಿ 400 ವ್ಯಾಟ್ಸ್‌ನ 6 ಎಂ,ಎಚ್ ದಾರಿದೀಪ ಅಳವಡಿಸುವುದು.
ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳಲ್ಲಿ ಅತೀ ಕಡಿಮೆ ದರ ಪಾರ್ಟ್(1)ಕ್ಕೆ 7.5 ಅದಿಕ ದರ ಮತ್ತು ಪಾರ್ಟ್(2)ಕ್ಕೆ ರೂ 7000/-ಸೂಚಿಸಿದ ಶ್ರೀ ವಿಶ್ವನಾಥ ,ಕೋಡಿಕಲ್ ಇವರ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು

20) ಉಳ್ಳಾಲ ಪುರಸಭೆ ವ್ಯಾಪ್ತಿಯಲ್ಲಿ ಕೋಡಿ ಬದ್ರಿಯಾ ಜುಮ್ಮ ಮಸೀದಿ ಬಳಿ ಸೆಮಿ ಹೈಮಾಸ್ಟ್ ಕಂಬ ಹಾಕಿ 400 ವ್ಯಾಟ್ಸ್ 4 ಎಂ.ಎಚ್. ದಾರಿದೀಪ ಅಳವಡಿಸುವುದು.
ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳಲ್ಲಿ ಅತೀ ಕಡಿಮೆ ದರ ಪಾರ್ಟ್(1)ಕ್ಕೆ 7.5% ಅಧಿಕ ದರ ಮತ್ತು ಪಾರ್ಟ್(11)ಕ್ಕೆ ರೂ. 7000/- ಸೂಚಿಸಿದ ಶ್ರೀ ವಿಶ್ವನಾಥ ಕೋಡಿಕಲ್ ಇವರ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

21) ಉಳ್ಳಾಲ ಪುರಸಭಾ ವ್ಯಾಪ್ತಿಯ 15ನೇ ವಾರ್ಡಿನ ಗುಳಿಗಬನದಿಂದ ತೆಂಗಿನಹಿತ್ಲು ನಾರಾಯಣ ಮನೆಯವರೆಗೆ 350ಮೀ 2ಇಂಚು ಕೊಳವೆಸಾಲು ಅಳವಡಿಸುವುದು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಬಂದ ಟೆಂಡರುಗಳಲ್ಲಿ ಶ್ರೀ ವಿಜಯಕುಮಾರ್, ಉಳ್ಳಾಲಬೈಲು ಇವರ ಟೆಂಡರು ದರವು ಕನಿಷ್ಟ ದರವಾಗಿದ್ದು ಅಂದಾಜುಪಟ್ಟಿಯ ದರದ ಶೇ7.5 ಅಧಿಕ ದರವಾಗಿದ್ದು ಸದ್ರಿ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು

22) ಪ್ಯಾಕೇಜ್ ನಂಬ್ರ: V
ಅ) 6(2) ವಾರ್ಡು ಸಂಖ್ಯೆ: 2ರ ಸೋಲಾರ್ ಕ್ಲಬ್ ಎದುರುಗಡೆಯಿಂದ ಜಮೀಲ್ ದಾದಾರವರ ಮನೆಗೆ ಹೋಗುವ ರಸ್ತೆಗೆ ಇಂಟರ್‌ಲಾಕ್ ಅಳವಡಿಸುವುದು
ಆ)6(6) ವಾರ್ಡು ಸಂಖ್ಯೆ: 6ರ ಉಳಿಯ ಮಾರ್ಗತಲೆ ರಸ್ತೆ ಅಭಿವೃದ್ಧಿಗೊಳಿಸಿ ಕಾಂಕ್ರಿಟೀಕರಣ
ಅ)6(1) ಕೋಟೆಪುರ ಸಿ ರಸ್ತೆಯಿಂದ ಎ.ಕೆ ಮೋಹಿದ್ದೀನ್ ಮನೆಯ ಹತ್ತಿರದಿಂದ ಡಿ ರಸ್ತೆಯವರೆಗೆ ಕಾಲುದಾರಿಗೆ ಕಾಂಕ್ರೀಟಿಕರಣ ಮತ್ತು ಕೋಟೆಪುರ ಸಿ ರಸ್ತೆಯಲ್ಲಿ ಸುಲ್ತಾನ್ ಸರ್ಕಲ್‌ನಿಂದ ಕೋಟೆಪುರ ಸಿ ರಸ್ತೆ ಕಾಮಗಾರಿ
ಆ)6(5)ಕೋಡಿ ಕೋಟೆಪುರ ಟಿಪ್ಪು ಸುಲ್ತಾನ್ ಶಾಲೆ ರಸ್ತೆ ಇಂಟರ್‌ಲಾಕಿಂಗ್ ಮತ್ತು ಕಾಂಕ್ರೀಟಿಕರಣ
ನಿರ್ಣಯ : ಈ ಬಗ್ಗೆ ಚರ್ಚಿಸಲಾಗಿ ಗುತ್ತಿಗೆದಾರರಾದ ಶ್ರೀ ವರದರಾಜ್ ಮಂಡ್ಯ ಇವರ ಟೆಂಡರು ದರ ಶೇ 8.6 ಕನಿಷ್ಟ ದರವಾಗಿದ್ದರೂ ಸದ್ರಿ ದರವನ್ನು ಪುರಸಭೆ ಒಪ್ಪದೆ ಸಂದಾನಕ್ಕೆ ಕರೆದು ನೆಗೋಶಿಯೇಶನ್ ಪ್ರಕಾರ ಒಪ್ಪಿದಂತೆ ಅಂದಾಜುಪಟ್ಟಿಯ ದರದ ಶೇಕಡಾ 7.9 ಅಧಿಕ ದರವನ್ನು ಒಪ್ಪಿ ಮಂಜೂರಾತಿಗೆ ಮಾನ್ಯ ಜಿಲ್ಲಾಧಿಕಾರಿಯವರನ್ನು ವಿನಂತಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 103:2009–2010ರ ಎಸ್.ಎಫ್.ಸಿ ನಿಧಿಯ ಶೇ 22.75ರ ಕ್ರಿಯಾಯೋಜನೆ ಮಂಜೂರಾತಿ ಕುರಿತು. ಯಾಯೋಜನೆಗಳನ್ನು ಅಂಗೀಕರಿಸಿ ಮಾನ್ಯ ಜಿಲ್ಲಾಧಿಕಾರಿಯವರಿಗೆ ಮಂಜೂರಾತಿಗಾಗಿ ಕಳುಹಿಸುವುದೆಂದು ನಿರ್ಣಯಿಸಲಾಯಿತು.

**ಎಸ್.ಎಫ್.ಸಿ ನಿಧಿಯಡಿ 22.75 ರ ಕ್ರಿಯಾ ಯೋಜನೆ ಒಟ್ಟು ಮೊತ್ತ – 51.32ಲಕ್ಷ**

**ಶೇ 16.20ರ ಪ.ಜಾತಿಯ ಕ್ರಿಯಾಯೋಜನೆ ಒಟ್ಟು ಮೊತ್ತ – 36.54ಲಕ್ಷ**

| **1. ಶೈಕ್ಷಣಿಕ ಪರಿಶಿಷ್ಟ ಜಾತಿ ಶೇ.40% – 14.62** | | **ಲಕ್ಷಗಳಲ್ಲಿ** |
|---|---|---|
| 1 | ಉಳ್ಳಾಲ ಪುರಸಭಾ ವ್ಯಾಪ್ತಿಯ ದಲಿತ ಹಿತ ರಕ್ಷಣಾ ಸಮಿತಿ(ರಿ) ಕಾಪಿಕಾಡು ಗಾಂಧೀನಗರ ಉಳ್ಳಾಲ –ಇವರಿಗೆ ಶೈಕ್ಷಣಿಕ /ಸಾಮಾಜಿಕ ಚಟುವಟಿಕೆಗಳಿಗಾಗಿ ಜಾಗ ಖರೀದಿಗಾಗಿ ಸಹಾಯಧನ | **2.00** |
| 2 | ಕಾಪಿಕಾಡು ಗಾಂಧೀನಗರ ಸಮಾಜ ಮಂದಿರದಲ್ಲಿ ಗ್ರಂಥಾಲಯ ನಿರ್ಮಾಣ ಕುರಿತು | **4.58** |
| 3 | ಬಾಬಾ ಅಂಬೇಡ್ಕರ್ ಜಯಂತಿ/ಬಾಬಾ ಜಗಜ್ಜೀವನ ರಾಮ್‌ಜಯಂತಿ/ಪೌರಕಾರ್ಮಿಕ ದಿನಾಚರಣೆ ಮತ್ತು ನಾಯಕತ್ವ ತರಬೇತಿ ಶಿಬಿರ ಮತ್ತು ಇತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಕುರಿತು | **0.56** |
| 4 | ಉಳ್ಳಾಲ ಪುರಸಭಾ ವ್ಯಾಪ್ತಿಯ ಪ.ಜಾತಿಯ ಶೇ.70ಕ್ಕಿಂತ ಜಾಸ್ತಿ ಅಂಕ ಪಡೆದ ಪದವಿ ಮತ್ತು ಪದವಿ ಪೂರ್ವ ಕಾಲೇಜಿನ ಉನ್ನತ ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡುವುದು. ಶಾಲಾ ಮಟ್ಟದ ,ರಾಷ್ಟ್ರಮಟ್ಟದ ಆಟೋಟ ಸ್ಪರ್ಧೆ /ಕಲಾತ್ಮಕ ಸ್ಪರ್ಧೆಗಳಲ್ಲಿ ಪ್ರಶಸ್ತಿ ಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಿ ಗೌರವಿಸುವ ಕುರಿತು | **2.50** |
| 5 | ಉಳ್ಳಾಲ ಪುರಸಭಾ ವ್ಯಾಪ್ತಿಯಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹೈಸ್ಕೂಲು ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಪ್ರವಾಸ ಕಾರ್ಯಕ್ರಮ ಏರ್ಪಡಿಸುವ ಬಗ್ಗೆ. | **4.98** |
| | **ಒಟ್ಟು ರೂ.** | **14.62** |
| **2. ಅರ್ಥಿಕ ಪರಿಶಿಷ್ಟ ಜಾತಿ ಶೇ.40% – 14.62** | | |
| 1 | ಪರಿಶಿಷ್ಟ ಜಾತಿ ಕುಟುಂಬದ ಮನೆಗಳಿಗೆ ಮನೆ ರಿಪೇರಿಗಾಗಿ ತಲಾ ರೂ.30,000 ದಂತೆ 30000*25 | **7.50** |
| 2 | ಉಳ್ಳಾಲ ಪುರಸಭಾ ಪೌರಕಾರ್ಮಿಕರಾದ ಶ್ರೀಮತಿ ರಾಜೀವಿ ಇವರಿಗೆ ಮನೆರಿಪೇರಿಗಾಗಿ ಸಹಾಯಧನ | **0.54** |
| 3 | ಉಳ್ಳಾಲ ಪುರಸಭಾ ವ್ಯಾಪ್ತಿಯ ಕಾಪಿಕಾಡು ಶ್ರೀ ಕೃಷ್ಣಾ ಭಜನಾ ಮಂದಿರದ ಬಳಿಯ ಸಮಾಜ ಭವನದಲ್ಲಿ ಗ್ರಂಥಾಲಯ ನಿರ್ಮಾಣ ಕುರಿತು | **6.58** |
| | **ಒಟ್ಟು ರೂ.** | **14.62** |
| **3. ಇತರ ಪರಿಶಿಷ್ಟ ಜಾತಿ 20% ರೂ. 7.32** | | |
| 1 | ಉಳ್ಳಾಲ ಪುರಸಭಾ ವ್ಯಾಪ್ತಿಯ ಶ್ರೀ ಕೋರ್ದಬ್ಬು ದೈವಸ್ಥಾನ ಬಂಡಿಕೊಟ್ಯ ಉಳ್ಳಾಲ ಇಲ್ಲಿಗೆ ನೂತನವಾಗಿ ನಿರ್ಮಾಣಗೊಳ್ಳಲಿರುವ ಅನ್ನ ಛತ್ರ ಕಟ್ಟಡ ನಿರ್ಮಾಣ ಕುರಿತು ಸಹಾಯಧನ | **5.00** |
| 2 | ಉಳ್ಳಾಲ ಪುರಸಭಾ ವ್ಯಾಪ್ತಿಯ ಮಹಾಂಕಾಳಿ ದೈವಸ್ಥಾನ ಚೆಂಬುಗುಡ್ಡೆ ಇದರ ಕಾಮಾಗಾರಿ ಪೂರ್ಣಗೊಳಿಸುವ ಕುರಿತು ಸಹಾಯಧನ | **1.15** |

| | | |
|---|---|---|
| 3 | ಉಳ್ಳಾಲ ಪುರಸಭಾ ವ್ಯಾಪ್ತಿಯ ಧರ್ಮನಗರ ಮಾದವನಾಯಕ್‌ರ ಮನೆಯಿಂದ ಪ್ರೇಮನಾಯಕ್‌ರವರ ಮನೆತನಕ ರಸ್ತೆ ಕಾಮಗಾರಿ ಕುರಿತು. | 1.15 |
| | **ಒಟ್ಟು ರೂ.** | 7.30 |

**ಎಸ್.ಎಫ್.ಸಿ ನಿಧಿಯಡಿ 22.75 ರ ಕ್ರಿಯಾ ಯೋಜನೆ ಒಟ್ಟು ಮೊತ್ತ – 51.32ಲಕ್ಷ**

**ಶೇ 6.55ರ ಕ್ರಿಯಾ ಯೋಜನೆ ಪರಿಶಿಷ್ಟ ಪಂಗಡ ಒಟ್ಟು ಮೊತ್ತ – 14.78 ಲಕ್ಷ**

| | | |
|---|---|---|
| **1. ಶೈಕ್ಷಣಿಕ ಪರಿಶಿಷ್ಟ ಪಂಗಡ ಶೇ.40% – 5.91ಲಕ್ಷ** | | **ಲಕ್ಷಗಳಲ್ಲಿ** |
| 1 | ಉಳ್ಳಾಲ ಪುರಸಭಾ ವ್ಯಾಪ್ತಿಯ ಕಾಪಿಕಾಡು ಶ್ರೀ ಕೃಷ್ಣ ಭಜನಾ ಮಂದಿರದ ಗ್ರಂಥಾಲಯಕ್ಕೆ ಪೀಠೋಪಕರಣಗಳು ಮತ್ತು ಪುಸ್ತಕಗಳ ಖರೀದಿ ಕುರಿತು | 2.66 |
| 2 | ಉಳ್ಳಾಲ ಪುರಸಭಾ ವ್ಯಾಪ್ತಿಯ ಪಂಗಡದ ಶೇ70ಕ್ಕಿಂತ ಜಾಸ್ತಿ ಅಂಕ ಪಡೆದ ಪದವಿ ಮತ್ತು ಪದವಿಪೂರ್ವ ಕಾಲೇಜಿನ ಉನ್ನತ ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡುವುದು. ಶಾಲಾಮಟ್ಟದ ರಾಷ್ಟ್ರ ಮಟ್ಟದ ಅಟೋಟ ಸ್ಪರ್ದೆ/ಕಲಾತ್ಮಕ ಸ್ಪರ್ದೆಗಳಲ್ಲಿ ಪ್ರಶಸ್ತಿ ಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಿ ಗೌರವಿಸುವ ಕುರಿತು | 3.25 |
| | **ಒಟ್ಟು ರೂ.** | 5.91 |
| **2. ಆರ್ಥಿಕ ಪರಿಶಿಷ್ಟ ಪಂಗಡ ಶೇ.40% – 5.91** | | |
| 1 | ಉಳ್ಳಾಲ ಪುರಸಭಾ ವ್ಯಾಪ್ತಿಯ ಪರಿಶಿಷ್ಟ ಪಂಗಡದ 10 ಫಲಾನುಭವಿಗಳಿಗೆ ಮನೆ ರಿಪೇರಿಗಾಗಿ ಸಹಾಯಧನ 30000*10 | 3.00 |
| 2 | ಉಳ್ಳಾಲ ಪುರಸಭಾ ವ್ಯಾಪ್ತಿಯ ಪ,ಪಂಗಡದ ಬಡ ಕುಟುಂಬದ ಹೆಣ್ಣುಮಕ್ಕಳ ಮದುವೆಗೆ ಸಹಾಯಧನ | 0.25 |
| 3 | ಉಳ್ಳಾಲ ಪುರಸಭಾ ವ್ಯಾಪ್ತಿಯ ಕಾಪಿಕಾಡು ಗಾಂಧಿನಗರ ಸಮಾಜ ಮಂದಿರದ ಗ್ರಂಥಾಲಯಕ್ಕೆ ಪೀಠೋಪಕರಣಗಳು ಮತ್ತು ಪುಸ್ತಕಗಳ ಖರೀದಿ ಕುರಿತು | 2.66 |
| | **ಒಟ್ಟು ರೂ.** | 5.91 |
| **3. ಇತರ ಪರಿಶಿಷ್ಟ ಜಾತಿ 20% ರೂ. 2.96** | | |
| 1 | ಉಳ್ಳಾಲ ಪುರಸಭಾ ವ್ಯಾಪ್ತಿಯ ಕಾಪಿಕಾಡು ಗಾಂಧಿನಗರ ಸರೋಜಿನಿಯವರ ಮನೆಯಿಂದ ಸುಂದರ್‌ರವರ ಮನೆಯವರೆಗೆ ರಸ್ತೆ ಕಾಮಗಾರಿ ಕುರಿತು | 2.96 |
| | **ಒಟ್ಟು ರೂ.** | 2.96 |

ವಿಷಯ:104 ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಅನುಮತಿಯಿಂದ ಕಟ್ಟಡ ಕಟ್ಟಲು ಅನುಮತಿ ನೀಡುತ್ತಿರುವ ಬಗ್ಗೆ ಆಯುಕ್ತರು ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಇವರ ಪತ್ರಸಂಖ್ಯೆ: ಮನಪ್ರಾ/ನಯೋಸ/92/2009-2010 ದಿನಾಂಕ 27-07-2009
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಯಥಾ ಸ್ಥಿತಿಯಲ್ಲಿಯೇ ಮುಂದುವರೆಸುವುದಾಗಿ ನಿರ್ಣಯಿಸಲಾಯಿತು.

ವಿಷಯ:105: ಉಳ್ಳಾಲ ಪುರಸಭಾ ವ್ಯಾಪ್ತಿಯ ಈ ಕೆಳಗಿನ ಸ್ಥಳಗಳಿಗೆ ಮರ್ಕೂರಿಲೈಟು ಅಳವಡಿಸಲು ಬಂದ ಪತ್ರದ ಬಗ್ಗೆ

1. ಉಳ್ಳಾಲ ಪುರಸಭೆ ವ್ಯಾಪ್ತಿಯ ಮಾರ್ಗತಲೆ ಜಂಕ್ಷನ್‌ಗೆ
2. ಉಳ್ಳಾಲ ಪುರಸಭೆ ವ್ಯಾಪ್ತಿಯ ಮಂಚಿಲ ಮಸೀದಿಗೆ
3. ಉಳ್ಳಾಲ ಪುರಸಭೆ ವ್ಯಾಪ್ತಿಯ ಪುರ್ಕಾನ್ ಮಸೀದಿ ಜಂಕ್ಷನ್ ಬಳಿ
4. ಉಳ್ಳಾಲ ಪುರಸಭೆ ವ್ಯಾಪ್ತಿಯ ಸುಂದರಿಬಾಗ್ ಅಲ್ ಬದ್ರಿಯಾ ಜುಮ್ಮಾ ಮಸೀದಿ ವಠಾರಕ್ಕೆ
5. ಉಳಿಯ ರಸ್ತೆಯ ಮುಖ್ಯಭಾಗದಲ್ಲಿ
6. ಕೋಡಿ ಕೆಳಗಿನಬೀದಿ
7. ಉಳ್ಳಾಲ ಗಣೇಶನಗರ ಮಂದಿರ ಓವರ್‌ಬ್ರಿಡ್ಜ್ ಹತ್ತಿರ

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅಳವಡಿಸುವುದಾಗಿ ನಿರ್ಣಯಿಸಲಾಯಿತು.

.

ವಿಷಯ:106: ಉಳ್ಳಾಲ ಪುರಸಭಾ ವ್ಯಾಪ್ತಿಯ ಪೆರ್ಮನ್ನೂರು ಗ್ರಾಮದ ಕಲ್ಲಾಪು ಎಂಬಲ್ಲಿ ಅಂಬತಡಿ ಹೋಗುವ ರಸ್ತೆ ನಿರ್ಮಾಣದ ಭೂಸ್ವಾಧೀನತೆಗೆ ಭೂ ಸ್ವಾಧೀನವೆಚ್ಚ ಠೇವಣಿ ಇರಿಸುವ ಬಗ್ಗೆ.
ಮಾನ್ಯಜಿಲ್ಲಾಧಿಕಾರಿಯವರ ಆದೇಶ ಸಂಖ್ಯೆ: ಎಲ್‌ಎಕ್ಯೂ:ಇತರ.ಸಿಆರ್:167/2007-08 ದಿನಾಂಕ 7-5-2009 ಹಾಗೂ ಮಾನ್ಯ ಭೂಸ್ವಾಧೀನಾಧಿಕಾರಿಯವರ ಆದೇಶ ನಂಬ್ರ: ಎಲ್‌ಎಕ್ಯೂ.ಸಿಆರ್:108/ 2007-08 ದಿನಾಂಕ 13-06-2008ರಂತೆ ಉಳ್ಳಾಲ ಪುರಸಭೆ ವ್ಯಾಪ್ತಿಯ ಪೆರ್ಮನ್ನೂರು ಗ್ರಾಮದ ಕಲ್ಲಾಪು ಅಂಬತಡಿ ಹೋಗಲು ರಸ್ತೆ ನಿರ್ಮಾಣಕ್ಕೆ ಭೂಸ್ವಾಧೀನಪಡಿಸಲು ಶೇ50ರಂತೆ ರೂ. 11-50ಲಕ್ಷದಷ್ಟು ಕಟ್ಟ ಬೇಕಾಗಿದ್ದು, ಅದರಲ್ಲಿ ರೂ. 10-00ಲಕ್ಷವನ್ನುಎಸ್.ಎಫ್.ಸಿ ನಿಧಿಯಿಂದ ಪಾವತಿಸಿದ್ದು ಉಳಿದ ರೂ. 1-50ಲಕ್ಷವನ್ನು ಪುರಸಭೆ ನಿಧಿಯಿಂದ ಪಾವತಿಸಲು ತೀರ್ಮಾನಿಸಲಾಯಿತು. ಹಾಗೂ ಉಳಿಕೆ ಶೇ 50 ಹಣವನ್ನು 2009-2010ನೇ ಸಾಲಿನ ಎಸ್.ಎಫ್.ಸಿ ಹಾಗೂ ಪುರಸಭಾ ನಿಧಿಯಿಂದ ಪಾವತಿಸುವುದಾಗಿ ನಿರ್ಣಯಿಸಲಾಯಿತು. ಈ ಬಗ್ಗೆ ಶ್ರೀ ದಿನಕರ ಉಳ್ಳಾಲ್‌ರವರು ವಿರೋದವನ್ನು ವ್ಯಕ್ತಪಡಿಸಿರುವುದನ್ನು ದಾಖಲಿಸಿ ಪಾವತಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:107: ಉಳ್ಳಾಲ ಪುರಸಭಾ ವ್ಯಾಪ್ತಿಯ 18ನೇ ವಾರ್ಡಿನ ಭಟ್ನಗರ ಶಿವಾಜಿಕ್ಲಬ್ ಬಳಿ ಕಾಲುದಾರಿಗೆ ಮೆಟ್ಟಿಲು ರಚನೆ ಮಾಡುವಂತೆ ಸ್ಥಳೀಯ ಸದಸ್ಯರಾದ ಶ್ರೀಮತಿ ಲಲಿತಸುಂದರ್ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡುವುದಾಗಿ ನಿರ್ಣಯಿಸಲಾಯಿತು.

ವಿಷಯ:108: ಉಳ್ಳಾಲ ಪುರಸಭಾ ವ್ಯಾಪ್ತಿಯ 18ನೇ ವಾರ್ಡಿನ ಭಟ್ನಗರ ಶಿವಾಜಿಕ್ಲಬ್‌ನ ಕೆಳಗಿನ ಒಳಪೇಟೆಗೆ ಹೋಗುವ ರಸ್ತೆಗೆ ದಾರಿದೀಪ ವಿಸ್ತರಣೆ ಮಾಡುವಂತೆ ಸ್ಥಳೀಯ ಸದಸ್ಯರಾದ ಶ್ರೀಮತಿ ಲಲಿತಸುಂದರ್ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಮೆಸ್ಕಾಂ ಇಲಾಖೆಗೆ ಪತ್ರ ಬರೆದು ನಂತರ ಪುರಸಭೆಯಿಂದ ಕಾಮಗಾರಿ ನಿರ್ವಹಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:109: ಉಳ್ಳಾಲ ಪುರಸಭಾ ವ್ಯಾಪ್ತಿಯ 10ನೇ ವಾರ್ಡಿನ ಟಿ.ಸಿ.ರಸ್ತೆ ಅಕ್ಕರಕೆರೆ ರಸ್ತೆಯಲ್ಲಿ ಚರಂಡಿ ರಚನೆ ಕಾಮಗಾರಿಗೆ ತಯಾರಿಸಿದ ಅಂದಾಜುಪಟ್ಟಿ 0.95ಲಕ್ಷಕ್ಕಿಂತ ಹೆಚ್ಚುವರಿ ಕಾಮಗಾರಿ ನಿರ್ವಹಿಸಿದ ಬಗ್ಗೆ ಗುತ್ತಿಗೆದಾರರಾದ ಶ್ರೀ ಬಿ.ಎಸ್.ಶರೀಫ್‌ರವರಿಗೆ ರೂ.23,607/- ಪಾವತಿಸುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಹೆಚ್ಚುವರಿ ರೂ. 23,607/-ನ್ನು ಪಾವತಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:110: ಉಳ್ಳಾಲ ಪುರಸಭಾ ವ್ಯಾಪ್ತಿಯ 15ನೇ ವಾರ್ಡಿನ ಒಂಬತ್ತುಕೆರೆ ಡ್ರೈವರ್ ಬಾಬುರವರ ಮನೆ ಹಿಂಬಂದಿಯ ಚರಂಡಿಯ ಬದಿ ಕಟ್ಟುವ ಕಾಮಗಾರಿಗೆ ತಯಾರಿಸಿದ ಅಂದಾಜುಪಟ್ಟಿ ರೂ.0.55ಲಕ್ಷಕ್ಕಿಂತ ಹೆಚ್ಚುವರಿ ಕಾಮಗಾರಿ ನಿರ್ವಹಿಸಿದ ಬಗ್ಗೆ ಗುತ್ತಿಗೆದಾರರಾದ ಶ್ರೀ ಬಿ.ಎಸ್.ಶರೀಫ್‌ರವರಿಗೆ ರೂ. 8,336-00ನ್ನು ಪಾವತಿಸುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಹೆಚ್ಚುವರಿ ರೂ. 8,336/-ನ್ನು ಪಾವತಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:111: 2009-2010ನೇ ಸಾಲಿನ ಪುರಸಭಾ ನಿದಿಯಲ್ಲಿ ಮನೆ ರಿಪೇರಿಗೆ ಸಹಾಯಧನ ನೀಡುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ
1) ಶ್ರೀಮತಿ ದೇವಕಿ ಕೊಂ. ಗುರುವಪ್ಪ , 3-65/15,ಅಂಬೇಡ್ಕರ್ ನಗರ, ಚೆಂಬುಗುಡ್ಡೆ
2) ಶ್ರೀಮತಿ ಕಾಶಿ, ಕಟ್ಟಡನಂಬ್ರ: 3-65/11, ಅಂಬೇಡ್ಕರ್ ನಗರ ಚೆಂಬುಗುಡ್ಡೆ
3) ಶ್ರೀ ಬಾಲಕೃಷ್ಣ ಬಿನ್. ದಿ. ಅಂಗಾರ, 3-65/7ಎ, ಅಂಬೇಡ್ಕರ್ ನಗರ ಚೆಂಬುಗುಡ್ಡೆ
4) ಎಸ್. ಆನಂದ, ಬಿನ್ ಶಿವಪ್ಪ 4-177/2, ಅಂಬೋಡಿ ಮನೆ ಪೆರ್ಮನ್ನೂರು
5) ಭವಾನಿ ಕೋಂ ಸುಬ್ಬ, 23-96, ಕಾಫಿಕಾಡು,ಉಳ್ಳಾಲ
6) ನಾರಾಯಣ ಬಿನ್ ಬೈರ 18-40/2,ಗಾಂಧಿನಗರ, ಉಳ್ಳಾಲ
7) ಸಂಜೀವ ನಾಯ್ಕ ಬಿನ್. ಮೋನಪ್ಪ ಸಮಗಾರ 4-220(ಎ) , ಸೇವಂತಿಗುಡ್ಡೆ ಪೆರ್ಮನ್ನೂರು.
ಇವರುಗಳಿಗೆ ತಲಾ ರೂ 40,000/-ದಂತೆ ಸಹಾಯಧನ ನೀಡುವುದಾಗಿ ನಿರ್ಣಯಿಸಲಾಯಿತು.

ವಿಷಯ:112: 2008-2009ನೇ ಸಾಲಿನ ಎಸ್.ಎಫ್.ಸಿ ಶೇ18ರ ನಿಧಿಯಿಂದ ವೈದ್ಯಕೀಯ ಚಿಕಿತ್ಸೆಗೆ ಸಹಾಯಧನ ನೀಡುವ ಕುರಿತು.

ನಿರ್ಣಯ:ಈ ಬಗ್ಗೆ ಚರ್ಚಿಸಲಾಗಿ ಶ್ರೀ ಚರಣೇಶ್ ಬಿನ್ ಗಂಗಾಧರ್, 23-131/1, ಕಾಫಿಕಾಡು, ಉಳ್ಳಾಲ ಇವರು ಕಿಡ್ನಿ ವೈಪಲ್ಯದಿಂದ ಬಳಲುತ್ತಿರುವುದರಿಂದ ರೂ 15,000/-ಸಹಾಯಧನ ನೀಡುವುದಾಗಿ ನಿರ್ಣಯಿಸಲಾಯಿತು.

ವಿಷಯ:113: 2008-2009ನೇ ಸಾಲಿನ ಎಸ್.ಎಫ್.ಸಿ ಶೇ18ರ ನಿಧಿಯಿಂದ ಸ್ವಉದ್ಯೋಗಕ್ಕಾಗಿ ಸಹಾಯಧನ ನೀಡುವ ಕುರಿತು.
ನಿರ್ಣಯ:ಈ ಬಗ್ಗೆ ಚರ್ಚಿಸಲಾಗಿ ಶ್ರೀ ರಾಜೇಶ್ ಯು. ಬಿನ್. ಸದಾನಂದ, ಗಾಂಧಿನಗರ ಉಳ್ಳಾಲ ಮನೆನಂಬ್ರ: 23-108 ಇವರಿಗೆ ಅಟೋರಿಕ್ಷಾ ಖರೀದಿಗೆ ರೂ. 25,000/- ಸಹಾಯಧನ ನೀಡುವುದಾಗಿ ನಿರ್ಣಯಿಸಲಾಯಿತು.

ವಿಷಯ:115: ಉಳ್ಳಾಲ ಪುರಸಭಾ ವ್ಯಾಪ್ತಿಯ 18ನೇ ವಾರ್ಡು ತೊಕ್ಕೋಟ್ಟು ಒಳಪೇಟೆ ಭವಾನಿಶಂಕರ ಮಿಲ್ಲಿನ ಹಿಂಬಂದಿ ಇರುವ ಚರಂಡಿಗೆ ಆರ್.ಸಿ.ಸಿ. ಮುಚ್ಚಳ ಒದಗಿಸುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀಮತಿ ಲಲಿತ ಸುಂದರ್ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:116:ಉಳ್ಳಾಲ ಪುರಸಭೆ ವ್ಯಾಪ್ತಿಯ 10ನೇ ವಾರ್ಡಿನ ಹಳೇಕೋಟೆ ಟ್ಯಾಂಕ್ ರಸ್ತೆ ಕಾಂಕ್ರೀಟಿಕರಣ ಕಾಮಗಾರಿಗೆ ತಯಾರಿಸಿದ ಅಂದಾಜುಪಟ್ಟಿ 1-00ಲಕ್ಷಕಿಂತ ಹೆಚ್ಚುವರಿ ಕಾಮಗಾರಿ ನಿರ್ವಹಿಸಿದ ಬಗ್ಗೆ ಗುತ್ತಿಗೆದಾರರು ಶ್ರೀ ವಿಶ್ವನಾಥ ಶೆಟ್ಟಿ ಇವರಿಗೆ ರೂ 17204/-ನ್ನು ಪಾವತಿಸುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಹೆಚ್ಚುವರಿ ರೂ. 17204/-ನ್ನು ಪಾವತಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:117: ಉಳ್ಳಾಲ ಪುರಸಭೆ ವ್ಯಾಪ್ತಿಯ 22ನೇ ವಾರ್ಡು ಅಂಬತಡಿ ಮತ್ತು ಮೊನೆಪು ಪ್ರದೇಶಕ್ಕೆ 2 ಇಂಚಿನ 775ಮೀ ಕೊಳವೆವಿಸ್ತರಣೆ ಮಾಡುವ ಕುರಿತು ಸ್ಥಳೀಯ ಸದಸ್ಯರಾದ ಶ್ರೀ ಯು.ಎಚ್.ಫಾರೂಕ್ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ಸಹಿ ಅಧ್ಯಕ್ಷರು ಮತ್ತು ಸದಸ್ಯರು

(ಯಥಾಪ್ರತಿ)

ಮುಖ್ಯಾಧಿಕಾರಿ
ಉಳ್ಳಾಲ ಪುರಸಭೆ,ದ.ಕ